ಸದಸ್ಯರು ನಡೆದುಕೊಳ್ಳತೊಡಗಿದರು. ಮಾತು ಬಿಟ್ಟರು. ಇನ್ನು ಈ ಭಾಗೀಚಿಕ್ಕಿಯನ್ನಂತೂ ಒಂದಿಂಚೂ ಬದಲಾಯಿಸಲು ಸಾಧ್ಯವಾಗಲಿಲ್ಲ. 'ಇದ್ದದ್ದು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದರಂತೆ' ಎನ್ನುತ್ತ ಶಾರದೆಯನ್ನೇ ಒಪ್ಪಿಸುವ ಪ್ರಯತ್ನ ಮಾಡುತ್ತಿದ್ದಳು. ಶಾರದೆಗಂತೂ ಬಾಣಲೆಯಿಂದ ಸೀದಾ ಬೆಂಕಿಗೆ ಬಿದ್ದ ಅನುಭವವಾಗಿತ್ತು. ಇಲ್ಲದ ರಾದ್ಧಾಂತವನ್ನು ಮೈ ಮೇಲೆ ಎಳೆದುಕೊಂಡಿದ್ದಕ್ಕೆ ಪ್ರತಿಕ್ಷಣವೂ ತನ್ನ ಬಗ್ಗೆ ತಾನೇ ಕೋಪ ಮಾಡಿಕೊಳ್ಳತೊಡಗಿದಳು. ಇನ್ನು ಈ ವಿಷಯವನ್ನು ಯಾರಲ್ಲಿಯೂ ಹೇಳಲಾಗದೆ ಬಿಸಿತುಪ್ಪವ ನೆಕ್ಕಿದವಳಂತೆ ಹೊಯ್ದಾಡತೊಡಗಿದ್ದಳು. ಆ ದಿನವಂತೂ ಮನೆ ಪೂರ್ತಿ ರಣರಂಗವೇ ಆಗಿ ಹೋಯಿತು. ಆಗಿನ್ನೂ ಬೆಳಗ್ಗೆ ಶಾರದೆ ಬಾಗಿಲು ಸಾರಿಸಿ ಒಳಗೆ ಬರುತ್ತಿದ್ದಳು. ಬಚ್ಚಲಮನೆಯಲ್ಲಿನ ತಾರಕ ಸ್ವರದ ಮಾತುಗಳು ಅಂಗಳದವರೆಗೂ ಕೇಳಿ ಬರುತ್ತಿದ್ದವು. ಎದ್ದೆನೋ ಬಿದ್ದೆನೋ ಎಂದು ಓಡಿದ್ದಳು... ಹೋಗಿ ನೋಡಿದರೆ ಅವಳ ಮಾವ ಗೋಡೆ ಹಿಡಿದು ಕೂತಿದ್ದರು. ಪುಟ್ಟ ಮಗು ಬರಿಯೊಂದು ಚಡ್ಡಿಯಲ್ಲಿ ಅರ್ಧಂಬರ್ಧ ಒದ್ದೆಯಾಗಿ ನಿಂತಿತ್ತು. ಭಾಗೀಚಿಕ್ಕಿ ರೌದ್ರಾವತಾರ ತಾಳಿದ್ದಳು. ಶಾರದೆ ಒಳಗೆ ನುಗ್ಗಿದವಳೇ ಏನು ಎಂತ ನೋಡದೆ ಭಾಗೀಚಿಕ್ಕಿಯ ಕೆನ್ನೆಗೊಂದು ಬಾರಿಸಿಯೇ ಬಿಟ್ಟಳು. ಭಾಗೀಚಿಕ್ಕಿ ಸುಮ್ಮನೆ ಒಮ್ಮೆ ಶಾರದೆಯನ್ನು ನೋಡಿದವಳೇ, 'ಈ ಮುದುಕನಿಗೆ ಹೆಣ್ಣು ಮಗುವಿಗೆ ಸ್ನಾನ ಮಾಡಿಸೋ ಚಪಲ. ಬೇಡ ಅಂದರೆ ನನ್ನನ್ನೇ ಬೈತಾನೆ' ಎಂದು ಏಕವಚನದಲ್ಲಿ ಹೇಳಿ ತನ್ನ ಕಾರ್ಯಕ್ಕೆ ಸಮಜಾಯಿಸಿಕೊಡುವ ಪ್ರಯತ್ನ ಮಾಡಿದ್ದಳು. ಆದರೆ ಅವಳ ಈ ರಂಪಾಟಗಳಿಂದ ಈಗಾಗಲೇ ರೋಸಿ ಹೋಗಿದ್ದ ಶಾರದೆ 'ದಯವಿಟ್ಟು ಹೊರಟುಹೋಗು' ಎನ್ನುತ್ತ ಭಾಗೀಚಿಕ್ಕಿಗೆ ಬಾಗಿಲು ತೋರಿಸಿದ್ದಳು. ಆ ಕ್ಷಣಕ್ಕೆ ಭಾಗೀರಥಿ ಮನೆ ಬಿಟ್ಟು ಹೊರಡಲಿಲ್ಲ. ಸುಮ್ಮನೆ ಕೋಣೆ ಸೇರಿಕೊಂಡಳು. ಆದರೆ ಶಾರದೆ ಸಂಜೆ ಕೆಲಸದಿಂದ ಮರಳುವ ವೇಳೆಗೆ ಬ್ಯಾಗನ್ನು ಬಗಲಲ್ಲಿ ಸಿಕ್ಕಿಸಿಕೊಂಡು ಮೆಟ್ಟಿಲಲ್ಲೇ ಕೂತಿದ್ದಳು. ಅವಳನ್ನು ಕಂಡೊಡನೆ ಶಾರದೆ ಸಂಕಟವಾಯಿತು. ಛೇ ತಾನು ಅಷ್ಟೊಂದು ಕೆಟ್ಟದಾಗಿ ನಡೆಸಿಕೊಳ್ಳಬಾರದಿತ್ತು ಎನ್ನಿಸಿ 'ನಡೀ ಒಳಗೆ' ಎಂದಳು. ಆದರೆ ಭಾಗೀರಥಿ ಒಳಗೆ ಬರಲಿಲ್ಲ. ಬದಲಾಗಿ 'ಪುಟ್ಟಿ, ನನ್ನ ಮಗಳು ಸತ್ತಿದ್ದು ಹೆಂಗೆ ಗೊತ್ತಾ, ಅವರಪ್ಪನಿಂದಲೇ. ನಿನ್ನ ಮಗಳನ್ನ ಜೋಪಾನ ಮಾಡು' ಎನ್ನುತ್ತ ಶಾರದೆಯ ಉತ್ತರಕ್ಕೂ ಕಾಯದೆ ದರದರನೆ ಹೋಗಿಬಿಟ್ಟಳು.

## ದೀಪ್ತಿ ಭದ್ರಾವತಿ

ಪ್ರಸ್ತುತ ಭದ್ರಾವತಿಯಲ್ಲಿ ನೆಲೆಸಿರುವ ದೀಪ್ತಿ 'ಆ ಬದಿಯ ಹೂವು' ಕಥಾ ಸಂಕಲನ, 'ಕಾಗದದ ಕುದುರೆ', 'ಗ್ರೀನ್ ರೂಮಿನಲ್ಲಿ' ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ನಾಟಕ ಅಭಿನಯ, ಯಕ್ಷಗಾನ, ತಾಳಮದ್ದಲೆ ಅವರ ಆಸಕ್ತಿಯ ಕ್ಷೇತ್ರಗಳು.